6	ದೀನ್ ದಯಾಳ್‌ಹತ್‌ಕರ್ಗಾ ಯೋಜನೆ ಕೆ ಹೆಚ್ ಡಿ ಸಿ	–	257.37	97.36
7	ದೀನ್ ದಯಾಳ್‌ಹತ್‌ಕರ್ಗಾ ಯೋಜನೆ ಸಹಕಾರ	–	41.13	38.56
8	ಮಾರುಕಟ್ಟೆ ಅಭಿವೃದ್ಧಿ ಯೋಜನೆ:ಸಹಕಾರ	29.81	–	–
9	ಮಾರುಕಟ್ಟೆ ಅಭಿವೃದ್ಧಿ ಯೋಜನೆ ಕೆ ಹೆಚ್ ಡಿ ಸಿ	150.91	–	–
10	ಕೈಮಗ್ಗ ನೇಕಾರರಿಗೆ ಸಮಗ್ರ ಪ್ರಸ್ತಾವ ಯೋಜನೆ	18.16	20.27	18.74
11	ಜಿಲ್ಲಾಮಟ್ಟದ ವಸ್ತು ಪ್ರದರ್ಶನ	5.91	5.81	3.59
12	ರಾಷ್ಟ್ರೀಯ ಕೈಮಗ್ಗ ಮೇಳ	–	–	19.00
	ಒಟ್ಟು	**291.86**	**471.81**	**494.35**

ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ

3120 (3784) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯು ಜಾರಿಗೆ ಬಂದಿರುವುದೇ; ಯಾವಾಗ ಈ ಕೈಗಾರಿಕಾನೀತಿಯನ್ನು ಜಾರಿಗೆ ತರಲಾಯಿತು; ಈ ಹೊಸ ಕೈಗಾರಿಕಾ ನೀತಿಯ ಉದ್ದೇಶಗಳೇನು;

ಆ) ಹೊಸ ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳನ್ನು ವರ್ಗೀಕರಿಸಲಾಗಿದೆಯೇ; ಹಾಗಾದರೆ ಎಷ್ಟು ವರ್ಗಗಳನ್ನು ಮಾಡಲಾಗಿದೆ;

ಇ) ಬಿಜಾಪುರ ಜಿಲ್ಲೆಯನ್ನು ಹೊಸ ಕೈಗಾರಿಕಾ ನೀತಿಯಡಿ ಯಾವ ವರ್ಗವನ್ನು ಮಾಡಲಾಗಿದೆ;

ಈ) ಸೇರಿಸಿರುವ ವರ್ಗದಡಿ ಬಿಜಾಪುರ ಜಿಲ್ಲೆಗೆ ಆಗುವ ಲಾಭಗಳೇನು;

ಉ) ಹೊಸ ಕೈಗಾರಿಕಾ ನೀತಿಯಡಿ ಬಿಜಾಪುರ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ;

ಊ) ರೂಪಿಸಿದ್ದರೆ, ಅಂತಹ ಯೋಜನೆಗಳು ಯಾವುವು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕರ್ನಾಟಕ ರಾಜ್ಯವು 2001–02ನೇ ಸಾಲಿನಲ್ಲಿ ತನ್ನ ಹೊಸ ಕೈಗಾರಿಕಾ ನೀತಿಯನ್ನು ದಿ:1.4.2001 ರಲ್ಲಿ ಜಾರಿಗೆ ತಂದಿತು. ಹೊಸ ಕೈಗಾರಿಕಾ ನೀತಿಯ ಉದ್ದೇಶಗಳು ಈ ಕೆಳಕಂಡಂತಿವೆ:

ಅ. ಕ್ಷಿಪ್ರವಾದ ತಂತ್ರಜ್ಞಾನ ಉನ್ನತೀಕರಣ

ಆ. ವಿವಿಧ ಕ್ಷೇತ್ರಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮಾನವ ಸಂಪನ್ಮೂಲಗಳ ಉಪಯೋಗ ಪೂರ್ಣ ಪ್ರಮಾಣದಲ್ಲಿ ಮಾಡಲು ಉತ್ತೇಜಿಸುವುದು.

ಇ. ಸೇವಾಕ್ಷೇತ್ರದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳಿಗೆ ಒತ್ತಾಸೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ

ಈ. ಕೈಗಾರಿಕೆಗಳಿಗೆ ಉನ್ನತಮಟ್ಟದ ಮೂಲಭೂತ ಸೌಕರ್ಯಗಳನ್ನು ನೀಡುವುದು.

ಆ) ಹೊಸ ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ:

1. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು
2. ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು
3. ಬೃಹತ್ ಕೈಗಾರಿಕೆಗಳು

ಇ) ಬಿಜಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು "ಸಿ" ವಲಯಕ್ಕೆ ಹಾಗೂ ಬಿಜಾಪುರದ ಕಿರು ಬೆಳವಣಿಗೆ ಕೇಂದ್ರವನ್ನು "ಡಿ" ವಲಯಗಳೆಂದು ವರ್ಗೀಕರಿಸಲಾಗಿದೆ.

ಈ) ಅ) "ಸಿ" ವಲಯದಲ್ಲಿ ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಆಸ್ತಿ ಮೌಲ್ಯದ ಶೇ. 20 ರಷ್ಟು (ಗರಿಷ್ಟ ಮೊತ್ತ ರೂ. 10 ಲಕ್ಷ) ಬಂಡವಾಳ ಸಹಾಯಧನವನ್ನು ನೀಡಲಾಗುವುದು.

ಆ) "ಡಿ" ವಲಯದಲ್ಲಿ ಅತಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಆಸ್ತಿ ಮೌಲ್ಯದ ಶೇ. 25 ರಷ್ಟು (ಗರಿಷ್ಟ ಮೊತ್ತ ರೂ. 12.50 ಲಕ್ಷ) ಬಂಡವಾಳ ಸಹಾಯಧನವನ್ನು ನೀಡಲಾಗುವುದು.

ಇ. "ಸಿ" ವಲಯದಲ್ಲಿ ಗರಿಷ್ಠ 5 ವರ್ಷಗಳ ವರೆಗೆ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗುವುದು.

ಈ. "ಡಿ" ವಲಯದಲ್ಲಿ ಯೋಜನಾ ಅನುಷ್ಠಾನ ಆರಂಭವಾದಾಗಿನಿಂದ ಗರಿಷ್ಠ 8 ವರ್ಷಗಳ ವರೆಗೆ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗುವುದು.

ಉ) ಸರ್ಕಾರವು ಸ್ವತಃ ಯಾವುದೇ ಕೈಗಾರಿಕೆಯನ್ನು ಬಿಜಾಪುರ ಜಿಲ್ಲೆಯಲ್ಲಿ ಸ್ಥಾಪಿಸುವ ಯೋಜನೆಯನ್ನು ಹೊಂದಿರುವುದಿಲ್ಲ. ಇಲ್ಲಿ ಸ್ಥಾಪಿಸಲಾಗುವ ಕೈಗಾರಿಕೆಗಳಿಗೆ 2001–06ರ ಕೈಗಾರಿಕಾ ನೀತಿಯನ್ವಯ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು.

ಊ) ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮೆ:ತಾರ್‌ಗೋಲ್ ಡಿಸ್ಟಿಲರೀಸ್ ಮತ್ತು ಮೆ: ಎವರ್‌ಗ್ರೀನ್ ಪ್ಲಾಸ್ಟಿಕ್ ಇಂಡಸ್ಟ್ರೀಸ್ ಘಟಕಗಳು ಕ್ರಮವಾಗಿ ರೂ. 11.80 ಕೋಟಿ ಮತ್ತು ರೂ. 3.98 ಕೋಟಿ ಬಂಡವಾಳವನ್ನು ಹೂಡಲು ಅನುಮತಿ ನೀಡಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೋದ್ಯಮಿಗಳಿಗೆ ಪೂರ್ಣ ಸಹಕಾರವನ್ನು ಹೊಸ ಕೈಗಾರಿಕೆ ನೀತಿಯನ್ವಯ ನೀಡಲಾಗುವುದು.

ರಾಜ್ಯದಲ್ಲಿ ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದು

3121 (3785) : ಶ್ರೀ ಪಾಟೀಲ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೋಗಗ್ರಸ್ಥ ಕೈಗಾರಿಕಾ ಘಟಕಗಳು ಯಾವುವು?

ಆ) ಈ ಕೈಗಾರಿಕೆ ಘಟಕಗಳು ರೋಗಗ್ರಸ್ಥವಾಗಲು ಕಾರಣಗಳೇನು;

ಇ) ರೋಗಗ್ರಸ್ಥ ಕೈಗಾರಿಕೆಯ ಘಟಕಗಳನ್ನು ಪುನಶ್ಚೇತನ ಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಅರ್ಹ 2013 ಕೈಗಾರಿಕೆಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕ್ ಮಾರ್ಗಸೂಚಿಯ ಪ್ರಕಾರ 453 ಘಟಕಗಳನ್ನು ರೋಗಗ್ರಸ್ಥವೆಂದು ಘೋಷಿಸಲಾಗಿದೆ.